## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 160/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಗೌರಮ್ಮ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಸೋಮಶೇಖರ್ | | **08.07.2025** |
| **ವಯಸ್ಸು** | ಃ 34 ವರ್ಷ | | |
| **ವೃತ್ತಿ** | ಃ ಕೂಲಿ ಕೆಲಸ | **ಪ್ರಾ.ಸಾ.** | ಃ 18 |
| **ವಾಸಸ್ಥಳ** | ಃ ವಾಜಮಂಗಲ | **ಚಾ.ಸಾ.** | ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 2 ನೇ ಆರೋಪಿ ಗೊತ್ತಿರುವುದಿಲ್ಲ. ನನ್ನ ಮದುವೆ 1 ನೇ ಆರೋಪಿಯೊಂದಿಗೆ ಆಗ 16 ವರ್ಷ ಆಗಿರತ್ತದೆ. 1 ನೇ ಆರೋಪಿತನಿಗೆ ಇಬ್ಬರು ಹೆಂಡತಿಯರು. ನಾನು ಮೊದಲನೇ ಹೆಂಡತಿ ಇರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಯಾರು ಫೋನ್ ಮಾಡಿರುವುದಿಲ್ಲ ಮತ್ತು ನನಗೆ ಹಣ ಕೊಡುತ್ತೇನೆ ಬಾ ಎಂದು ಯಾರು ಹೇಳಿರುವುದಿಲ್ಲ. ನನ್ನ ಗಂಡನಿಗೆ ನಾನು ಯಾವುದೇ ವಿಚಾರವನ್ನು ಹೇಳಿರುವುದಿಲ್ಲ. ಆ ನಂತರ ನನ್ನ ಗಂಡ ಏನಾಗಿರುತ್ತಾನೆ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಗಂಡನಿಗೆ ಒಬ್ಬ ವ್ಯಕ್ತಿ ಫೋನ್ ಮಾಡಿ ನನ್ನನ್ನು ಕರೆಯುತ್ತಿದ್ದ ಎಂಬ ವಿಚಾರವನ್ನು ನನ್ನ ಗಂಡನಿಗೆ ಹೇಳಿರುವುದಿಲ್ಲ. ನಾನು 2022 ನೇ ಇಸವಿಯಲ್ಲಿ ಯಾವುದೇ ಮೊಬೈಲ್ ಅನ್ನು ಹೊಂದಿರಲಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

ದಿನಾಂಕ **10.01.2022** ರಂದು ನಾನು ಕೆಲಸಕ್ಕೆ ಹೋದಾಗ ಯಾರೋ ಒಬ್ಬ ವ್ಯಕ್ತಿ ಆತನ ಮೊಬೈಲ್ ನಂಬರ್ **8073345203** ನಂಬರ್ ನಿಂದ ನನ್ನ ಮೊಬೈಲ್ ಸಂಖ್ಯೆ **7619145109** ಕ್ಕೆ ಫೋನ್ ಮಾಡಿ ಒಂದು ಸಾವಿರ ಕೊಡುತ್ತೇನೆ **sex** ಮಾಡಿಸಿಕೋ ಎಂದು ಕರೆಯುತ್ತಿದ್ದ. ಈ ವಿಚಾರವನ್ನು ನನ್ನ ಗಂಡನಿಗೆ ತಿಳಿಸಿದ ನನ್ನ ಗಂಡ ಆ ಫೋನ್ ನಂಬರ್ ಯಾರು ಮಾಡುತ್ತಿದ್ದಾರೆ ಎಂದು ತಿಳಿದುಕೊಂಡು ಆತನ ಮನೆಯ ಹತ್ತಿರ ಹೋದಾಗ ಆತನ ತಾಯಿ ಇದ್ದು ತನ್ನ ಮಗ ಅದ್ವೆತ ರೆಸಿಡೆನ್ಸಿ ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದು ಹೇಳಿದ್ದು ಆಕೆಯನ್ನು ಕರೆದುಕೊಂಡು ಲಾಡ್ಜ್ ಹತ್ತಿರ ಹೋಗಿ ಮಮತ ರವರ ಮಗ ಪ್ರಜ್ವಲ್ ನಿಗೆ ಏಕೆ ನೀನು ಹೆಂಡತಿಗೆ ಫೋನ್ ಮಾಡುತ್ತಿಯಾ ನಂಬರ್ ಅನ್ನು ಯಾರು ಕೊಟ್ಟರು ಎಂದು ವಿಚಾರಿಸಿ ಒಂದೆರಡು ಏಟನ್ನು ಕೊಟ್ಟು ಪೊಲೀಸ್ ಠಾಣೆಗೆ ಹೋಗೋಣ ನಡಿ ಎಂದು ಹೇಳಿದ್ದು ಆಗ ಪ್ರಜ್ವಲ್ ತಾನು ಯುನಿಫಾರಂ ಬಿಚ್ಚಿ ಬರುತ್ತೇನೆ ಎಂದು ಹೇಳಿ ಅದ್ವೆತಾ ರೆಸಿಡೆನ್ಸಿಯಿಂದ ರಸ್ತೆಗೆ ಬಿದ್ದಿದ್ದ ಅದೇ ಕಾರಕ್ಕಾಗಿ ಪೊಲೀಸರು ನನ್ನ ಗಂಡ ಮತ್ತು ಇತರರ ಮೇಲೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಈ ಬಗ್ಗೆ ನಾನು ಓದಿ ಹೇಳಿದ ನಿಪಿ**-27** ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. **1** ನೇ ಆರೋಪಿ ನನ್ನ ಗಂಡ ಇರುವುದರಿಂದ **2** ನೇ ಆರೋಪಿ ನನ್ನ ಗಂಡನ ಸ್ನೇಹಿತ ಇರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**